# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 171
ಸದಸ್ಯರ ಹೆಸರು : ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ
ಉತ್ತರಿಸುವ ದಿನಾಂಕ : 01-02-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ಹಕ್ಕು ಕಾಯ್ದೆಯಡಿ ಬುಡಕಟ್ಟು ಸಮುದಾಯದ ಜಮೀನು ಮಂಜೂರಾತಿಗೆ ಸಲ್ಲಿಸಿದ ಒಟ್ಟು ಅರ್ಜಿಗಳು ಹಾಗೂ ಮಂಜೂರಾದ ಅರ್ಜಿಗಳು ಎಷ್ಟು; | **ಅರಣ್ಯ ಹಕ್ಕು ಕಾಯ್ದೆಯಡಿ ಮಂಜೂರು ಮಾಡಿದ ಅರ್ಜಿಗಳ ವಿವರ.** (ಕೆಳಗಿನ ಕೋಷ್ಟಕ) |

| ಕ್ಲೇಮುದಾರರ ವಿವರ | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ವಿತರಿಸಿರುವ ಹಕ್ಕು ಪತ್ರಗಳ ಸಂಖ್ಯೆ | ಮಂಜೂರು ಮಾಡಿರುವ ಭೂಮಿ ವಿವರ (ಎಕರೆಗಳಲ್ಲಿ) | ತಿರಸ್ಕೃತಗೊಂಡಿರುವ ಅರ್ಜಿಗಳ ಸಂಖ್ಯೆ | ಇತ್ಯರ್ಥವಾಗದೆ ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| ಪರಿಶಿಷ್ಟ ಪಂಗಡ | 48418 | 12371 | 17171.91 | 32335 | 3712 |
| ಇತರೆ ಪಾರಂಪರಿಕ ಅರಣ್ಯ ವಾಸಿಗಳು | 240673 | 1972 | 2095.28 | 145767 | 92934 |
| ಸಮುದಾಯ ಹಕ್ಕುಗಳು | 5936 | 1352 | 36347.14 | 3146 | 1438 |
| **ಒಟ್ಟು** | **295027** | **15695** | **55614.33** | **181248** | **98084** |

**ಆ)** ಬಾಕಿ ಉಳಿದಿರುವ ಅರ್ಜಿಗಳು ಮಂಜೂರಾಗದೆ ಇರಲು ಕಾರಣ ಹಾಗೂ ಇದನ್ನು ಪೂರ್ಣಗೊಳಿಸಲು ಬೇಕಾಗುವ ಸಮಯ ಎಷ್ಟು;

**ಅರಣ್ಯ ಹಕ್ಕು ಕಾಯ್ದೆಯಡಿ 3 ಸಮಿತಿಗಳನ್ನು ಕೆಳಕಂಡಂತೆ ರಚಿಸಲಾಗಿದೆ.**

1. ಅರಣ್ಯ ಹಕ್ಕು ಸಮಿತಿ (ಗ್ರಾಮಪಂಚಾಯತಿ)
2. ಉಪ-ವಿಭಾಗೀಯ ಮಟ್ಟದ ಸಮಿತಿ
3. ಜಿಲ್ಲಾ ಮಟ್ಟದ ಸಮಿತಿ

ಸದರಿ ಸಮಿತಿಗಳು ಅರಣ್ಯ ಹಕ್ಕು ಅಧಿನಿಯಮದಡಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತಿದೆ.

**ಅರ್ಜಿಗಳು ಮಂಜೂರಾಗದಿರಲು ಪ್ರಮುಖ ಕಾರಣಗಳು ಕೆಳಕಂಡಂತಿದೆ:-**

1. ಕ್ಲೇಮುದಾರರು ಕಂದಾಯ ಭೂಮಿಗಾಗಿ ಅರ್ಜಿ ಸಲ್ಲಿಸಿರುತ್ತಾರೆ.
2. ಇತರೆ ಪಾರಂಪರಿಕ ಅರಣ್ಯ ವಾಸಿಗಳು 75 ವರ್ಷಗಳಿಂದ ಅರಣ್ಯ ಭೂಮಿಯನ್ನು ಅವಲಂಭಿಸಿರುವುದಕ್ಕೆ ಅಗತ್ಯ ದಾಖಲೆಗಳನ್ನು ಒದಗಿಸಲು ವಿಫಲರಾಗಿರುತ್ತಾರೆ.

| | | |
|---|---|---|
| | | 3. ಒಂದೇ ಕುಟುಂಬದಲ್ಲಿ ಬಹುಮಂದಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br>4. ಅರ್ಜಿದಾರರಲ್ಲಿ ಈಗಾಗಲೇ ಕೆಲವರು ಅರಣ್ಯ ಇಲಾಖಾ ವತಿಯಿಂದ ಸೌಲಭ್ಯಗಳನ್ನು ಪಡೆದು ಅರಣ್ಯದಿಂದ ತೆರವುಗೊಂಡು ಪುನರ್ ವಸತಿ ಪಡೆದಿರುತ್ತಾರೆ.<br>5. ಅರ್ಜಿ ಸಲ್ಲಿಸಿರುವ ಜಮೀನು ಕಂದಾಯ ಇಲಾಖೆಗೆ ಅಥವಾ ಅರಣ್ಯ ಇಲಾಖೆ ಸೇರಿದೆ ಎಂಬುದುರ ವಿವಾದಗಳು ತೀರ್ಮಾನವಾಗಬೇಕಾಗಿರುತ್ತದೆ.<br><br>ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಬಾಕಿ ಇರುವ ಹಾಗೂ ತಿರಸ್ಕೃತ ಅರ್ಜಿಗಳ ಪುನರ್ ಪರಿಶೀಲನೆ ಕಾರ್ಯವನ್ನು ದಿನಾಂಕ:15.12.2020 ರೊಳಗಾಗಿ ಪೂರ್ಣಗೊಳಿಸಲು ಸೂಚಿಸಲಾಗಿರುತ್ತದೆ. |
| ಇ) | ಹೊಸದಾಗಿ ಅರ್ಜಿ ಸಲ್ಲಿಸಲು ಇರುವ ಕಾಲಾವಕಾಶ ಎಷ್ಟು? | ನಿಯಮಾನುಸಾರ ಸಕ್ಷಮ ಸಮಿತಿಗಳಿಗೆ ಅರ್ಜಿಗಳನ್ನು ಸಲ್ಲಿಸಲು ಯಾವುದೇ ಕಾಲಮಿತಿ ನಿಗಧಿಪಡಿಸಿರುವುದಿಲ್ಲ. |

ಸಕಇ 29 ಎಸ್‌ಟಿಪಿ 2021

(ಬಿ.ಶ್ರೀರಾಮುಲು)
ಸಮಾಜ ಕಲ್ಯಾಣ ಸಚಿವರು